

# ದೇವರ ವರ ರಂಜಲ



■ ವಿನು ಗಂಗೆ

ಕಳೆದ ವರ್ಷ ನಾನು ದೂರಸಂಪರ್ಕ ಸಂವಹನ ವಿಭಾಗಕ್ಕೆ ವರ್ಗಾವಣೆಯಾದ ಹೊಸತು. ಇನ್ನೊಂದು ಶಾಖೆಯಾದ ಎಚ್‌ಎಸ್‌ಆರ್ ಲೇಔಟ್‌ನ ನಮ್ಮ 'ಬೆಳಕಿನ ಸಂಪರ್ಕ ತಂತು' **(OFC)** ಕಡಿತಗೊಂಡ ಸಲುವಾಗಿ ದುರಸ್ತಿ ಮಾಡಿಸಲು ಬಂದೆ. ಇತರ ಕಾರ್ಮಿಕರ ಬರುವಿಕೆಗಾಗಿ ಕಾಯುತ್ತಾ ನಿಲ್ಲುವ ಸಂದರ್ಭ. ನಿರೀಕ್ಷಿಸುವುದು ನಮ್ಮ ಪರಿಮಿತಿಯಲ್ಲಿದ್ದಾಗ ಕಾಯುವುದು ಯಾವಾಗಲೂ ಖುಷಿಯೇ. ಏಕೆಂದರೆ ಅದು ನಮ್ಮದೇ ಸಮಯ. ಕಾಯುವುದು ಬಿಟ್ಟು ಮಾಡಲು ಬೇರೇನೂ ಇರುವುದಿಲ್ಲ. ಹೊಸ ಜಾಗದಲ್ಲಿ ದೃಷ್ಟಿ ಹಾಯಿಸಿ ಕಣ್ಣು ತುಂಬಿಸಿಕೊಳ್ಳಲು ಬೇಕಾದಷ್ಟು ಸಿಗುತ್ತದೆ. ಸಾಮಾನ್ಯವಾಗಿ ಮರಗಿಡಗಳ ವಿಶೇಷ ನನ್ನ ಕಣ್ಣಿಗೆ ಬೀಳುವುದು ಇಂತಹ ಸಮಯದಲ್ಲೇ.

ಹೀಗೇ ಕಣ್ಣಾಡಿಸುವಾಗ ಅಲ್ಲಿ ಒಬ್ಬರ ಮನೆಯ ಕಾಂಪೌಂಡ್ ಸಂದಿಯಲ್ಲಿ ತೆಂಗಿನ ನಾರಿನ ನಡುವೆ ಎರಡೇ ಎರಡು ಪುಟ್ಟ ಎಲೆಗಳ ಸಸಿ ಕಂಡಿತು. ಹಿಂದೊಮ್ಮೆ ಬೀಜ ನೆಟ್ಟು ಮೊಳಕೆಯೊಡೆದು ಬರುವುದನ್ನು ಕಣ್ಣರಳಿಸಿ ಕಾದಿದ್ದ ನನಗೆ ಇದು ರಂಜಲ ಮರದ ಸಸಿಯೇ ಅನ್ನಿಸಿತು. ಆಪ್ತರನ್ನು ಅಪರಿಚಿತ ಜಾಗದಲ್ಲಿ ಅನಿರೀಕ್ಷಿತವಾಗಿ ಕಂಡ ಅನುಭವ! ಆದರೂ, ಮೊದಲು ಮಲೆನಾಡಾಗಿದ್ದು, ನಂತರ ಅರೆಮಲೆನಾಡಾಗಿ, ಈಗ ಕಾಡೆಲ್ಲಾ ಬೋಳಾಗಿಸಿಕೊಂಡು ಬಯಲುಸೀಮೆಯಾಗುವತ್ತ ನಡೆಯುತ್ತಿರುವ ನಮ್ಮ ಸೊರಬದಲ್ಲೇ, ಎಲ್ಲೋ ಒಂದು ಅನ್ನುವಂತೆ ಇರುವ ರಂಜಲ ಮರ ಎಲ್ಲಿ? ಬೆಂಗಳೂರಿನ ಎಚ್‌ಎಸ್‌ಆರ್ ಲೇಔಟ್‌ನಲ್ಲಿ?

ಮೊಳಕೆಯೊಡೆದ ಮೊದಲೆರಡು ಎಲೆಗಳು ಹುಟ್ಟಲಿರುವ ಸಸಿಯ ಎಲೆಗಿಂತ ಸಾಮಾನ್ಯವಾಗಿ ಸಂಪೂರ್ಣ ಭಿನ್ನವಾಗಿರುವುದರಿಂದ ಹುಟ್ಟಿದ ಎರಡೇ ಎಲೆಯಲ್ಲಿ ಪ್ರಭೇದವನ್ನು ಗುರುತಿಸುವುದು ಕಷ್ಟಸಾಧ್ಯ. ಆದರೆ ಆ ಎರಡೆಲಗಳ ಕಂಡು ಮನಸ್ಸು, ಇದು ರಂಜವೇ ಎಂದಿತು. ಕಾಂಪೌಂಡ್ ಸಂದಿಯಲ್ಲಿ ಕಸದಂತೆ ಆ ಸಸಿಯನ್ನು ಬಿಡಲು ಮನಸ್ಸು ಒಪ್ಪಲಿಲ್ಲ. ಮೊದಲೆರಡು ಎಲೆಗಳು ಮುಂದೆ ಹುಟ್ಟುವ ಸಸಿಗೆ ತಂದೆ–ತಾಯಿ ಇದ್ದಂತೆ, ಇವುಗಳಿಗೆ ಗಾಸಿಯಾದರೆ ಸಸಿ ಹುಟ್ಟುವುದಿಲ್ಲ (ಸಸಿ ದೊಡ್ಡದಾದ ನಂತರ ಈ ಎಲೆಗಳು ಉದುರಿ ಹೋಗುತ್ತವೆ). ಹಾಗಾಗಿ ನನ್ನ ಕೆಲಸ ಮುಗಿಸಿ ಸಂಜೆ ಮನೆಗೆ ತಲುಪುವ ತನಕ ಜೋಪಾನವಾಗಿ ಒಯ್ಯಬೇಕಿತ್ತು. ನಿಧಾನವಾಗಿ ಬೇರು ಸಮೇತ ತೆಗೆದು, ಅಲ್ಲೇ ಇದ್ದ ಎಲೆಯೊಂದರಲ್ಲಿ ಸ್ವಲ್ಪ ತೆಂಗಿನ ನಾರಿನ ಜೊತೆಗೆ ಸುತ್ತಿ ಜೋಪಾನವಾಗಿ ಇಟ್ಟುಕೊಂಡೆ. ಅಂದು ಪಾಕೀಟು ಸೇರಿದ ಎರಡೆಲೆಯ ಸಸಿ ಇಂದು ಯಾರೂ ಕೂಡಾ ಗುರುತಿಸುವಂತೆ ರಂಜಲ ಸಸಿಯಾಗಿ ಬೆಳೆದಿದೆ. ಅದರ ಮೊದಲೆರಡು ಎಲೆಗಳು ಇನ್ನೂ ಹಾಗೇ ಇವೆ. ಮುಂದಿನ ಮಳೆಗಾಲದಲ್ಲಿ ಭೂಮಿಯಲ್ಲಿ ಬೇರು ಬಿಡಲು ಶಕ್ತವಾಗುತ್ತದೆ.



ರಂಜಲ, ರಂಜ ಅಥವಾ ಬಕುಳ ಮರ **(Mimusops elengi)** ಭಾರತದಾದ್ಯಂತ ಹಾಗೂ ದಕ್ಷಿಣ ಏಷ್ಯಾದ ಭಾಗಗಳಲ್ಲಿ ಕಂಡುಬರುತ್ತದೆ. ನಿತ್ಯಹರಿದ್ವರ್ಣದ ಸುಂದರ, ದಟ್ಟತೆಯ ಮರ. ರಾಮಾಯಣ, ಮಹಾಭಾರತದ ಕಥೆಗಳಲ್ಲಿ ಕೂಡಾ ಇದರ ಉಲ್ಲೇಖವಿದೆ. ಕೃಷ್ಣ ಬೃಂದಾವನದಲ್ಲಿ ಈ ಮರದ ಕೆಳಗೆ ನಿಂತು ಕೊಳಲೂದಿ ಗೋಪಿಕೆಯರನ್ನು ಆಕರ್ಷಿಸುತ್ತಿದ್ದ ಎನ್ನಲಾಗಿದೆ. ಈ ಮರದ ಮಾಸಲು ಬಿಳಿ ಬಣ್ಣದ ನಕ್ಷತ್ರಾಕಾರದ ಹೂಗಳ ಸುಗಂಧ ಅಥವಾ ಮರದ ತುಂಬಾ ಬಿಡುವ ಕೆಂಪು ಹಣ್ಣುಗಳ ಪರಿಸರ, ಕೊಳಲಿನ ಕರೆಯನ್ನು ಹೆಚ್ಚು ಆಕರ್ಷಣೀಯವಾಗಿಸಿರಬಹುದು.

ಮಾನವನ ಹಾಗೂ ಇತರ ಜೀವಿಗಳ ಜೀವಕೊಂಡಿಯಲ್ಲಿ ಪ್ರಮುಖ ಪಾತ್ರ ವಹಿಸುವ ಅನೇಕ ವೃಕ್ಷಗಳು ನಮ್ಮ ಧರ್ಮದ ರಕ್ಷೆಯ ಕೊಡೆಯಡಿಯಲ್ಲಿವೆ. ಇದು ನಮ್ಮ ಉಳಿವಿನ ಮೂಲವೆಂದು ಕೂಡ ಕಾಣುತ್ತದೆ. ಅಂತೆಯೇ ಅರಳಿ, ಆಲ, ತೆಂಗು, ಬನ್ನಿ ಇತ್ಯಾದಿ ವೃಕ್ಷಗಳನ್ನು ಕಡಿಯಬೇಕು ಎಂದಾಗ ಒಂದು ಕ್ಷಣವಾದರೂ ಧರ್ಮಸೂಕ್ಷ್ಮ ಅಡ್ಡಬರುತ್ತದೆ. ಅದೇ ರೀತಿ ಬಕುಳ ಕೂಡ. ಉತ್ತರ ಭಾರತದ ಕಡೆ ಬಕುಳ 'ದೇವರ ವರ' ಎನಿಸಿಕೊಳ್ಳುತ್ತದೆ. ಅಲ್ಲೊಂದು ಇಲ್ಲೊಂದು ಮರಗಳು ಬೆಂಗಳೂರಿನಲ್ಲಿ ಹುಡುಕಿದರೆ ಸಿಗಬಹುದು.

ಚೆಂದಕ್ಕಾಗಿ ಹಾಗೂ ಸುವಾಸನೆಯ ಹೂಗಳಿಗಾಗಿ ಇದನ್ನು ಬೆಳೆಯಬಹುದು. ಹಣ್ಣುಗಳದು ಹುಳಿಮಿಶ್ರಿತ ಸಿಹಿ ರುಚಿ. ಬೆಳೆಯುವ ಗತಿ ಸ್ವಲ್ಪ ನಿಧಾನವಾದ್ದರಿಂದ ಆರಂಭದಲ್ಲಿ ಒಂದೆರಡು ವರ್ಷ ಆರೈಕೆ, ರಕ್ಷಣೆ ಬೇಕು. ರಂಜಲ ಹೂವಿನ ಘಮ ಎಲ್ಲೆಲ್ಲೂ ಹರಡಿ, ರಂಜಲ ಹಣ್ಣು ನಮಗೂ ಹಕ್ಕಿಗಳಿಗೂ ಸಿಗುವಂತಾಗಲಿ.

ಪ್ರತಿಕ್ರಿಯಿಸಿ: **feedback@sudha.co.in**